ಎಂ.ಕೆ. ರಾಜೇಶ್, ಚಾಮರಾಜನಗರ

*ಫೇಸ್‌ಬುಕ್, ಟ್ವಿಟರ್ ಖಾತೆಗೆ ಆಧಾರ್ ಕಡ್ಡಾಯ ಮಾಡಿದರೆ ಹೇಗೆ?*




ಒಳಿತೇ. ವಿಚಾರಾಧಾರ್, ವಿಮರ್ಶಾಧಾರ್, ವಿವೇಕಾಧಾರ್...

ಎಚ್.ಆರ್. ದೇಸಾಯಿ, ರಾಯಚೂರು

*ಮನುಷ್ಯ ಭೂಮಿಯ ಮೇಲೆ ಭದ್ರವಾಗಿ ನೇರವಾಗಿ ನಿಲ್ಲಬೇಕಾದರೆ ಎಷ್ಟು ಆಳದ ಬುನಾದಿ ಬೇಕು?*

ಆರಡಿಯನ್ನೂ ಮೀರಿರಬೇಕು (ಆರಡಿ = ಆರ+ಅಡಿ = ಯಾರದೇ ಕಾಲು ಹಿಡಿಯುವುದು)

ಆರ್. ಮಧುಸೂದನ್, ಹಾಸನ

*ಅವರು ಮಗಳಿಗೆ 'ವಿಧಿ' ಎಂದು ಹೆಸರಿಟ್ಟಿದ್ದಾರೆ. ಕಾರಣ ಏನಿರಬಹುದು ರಾಮ್?*

ಜಾತಕದಲ್ಲಿ ಎಲ್ಲರೂ ಅವಳ ನಿಯಮದಂತೆಯೇ ನಡೆಯುತ್ತಾರೆಂದು ಬರೆದಿದೆಯಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಪ್ರಸ್ತುತ ರಾಜಕೀಯದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ, ವಾಜಪೇಯಿಯಂತಹ ವ್ಯಕ್ತಿಗಳನ್ನು ನಿರೀಕ್ಷಿಸಬಹುದೆ?*




ಖಂಡಿತ ಪಕ್ಷಗಳ ಕಚೇರಿಗಳ ಗೋಡೆಗಳ ಮೇಲಿನ ಭಾವಚಿತ್ರಗಳಲ್ಲಿ.

ಎ. ಕೃಷ್ಣಾನಂದ ಶೆಟ್ಟಿ, ಮುಲ್ಕಿ

*ಒಳ್ಳೆಯವರಿಗೆ ಕೊನೆಯಲ್ಲಿ ಜಯ ಸಿಗಲು ಕಾರಣ ಏನು?*

ಕೆಟ್ಟವರಿಗಿಂತ ದೀರ್ಘಾಯಸ್ಸು ಹೊಂದಿರುವುದು.

ಕೃಷ್ಣಮೂರ್ತಿ ಎಸ್, ಬೆಂಗಳೂರು

*ಪುರುಷನೊಬ್ಬ ಸುಂದರಿಯೊಡನೆ ಮಾತನಾಡುವಾಗ ಆಕೆಯ ಕಣ್ಣು, ತುಟಿಗಳಲ್ಲಿ ಯಾವುದನ್ನು ಗಮನಿಸುತ್ತಿರಬೇಕು?*

ಕಣ್ಣನ್ನು; ತುಟಿ ಆಡುವುದು ಮೆದುಳಿನ ಮಾತು, ಕಣ್ಣು ಆಡುವುದು ಹೃದಯದ ಮಾತು.

ಕುಮಾರ ಚಲವಾದಿ, ಹಾಸನ

*ಹೆಂಡತಿಯ ಕಣ್ಣಲ್ಲಿ ಗಂಡನೇ ದೇವರು ಅನ್ನಿಸಿಕೊಳ್ಳಲು ಏನು ಮಾಡಬೇಕು?*

ಆಕೆಗೆ ಬೇಡವಾದಾಗ ಮಾಯವಾಗಿ, ಬೇಕಾದಾಗ ಪ್ರತ್ಯಕ್ಷವಾಗುತ್ತಿರಬೇಕು.

ಫಾಲನೇತ್ರ ಸಜ್ಜನ, ಶಿರಸಿ

*ಮುಖ್ಯಮಂತ್ರಿ ಸ್ಥಾನ ಪಡೆಯುವುದಕ್ಕೂ, ಈ ಅಂಕಣದಲ್ಲಿ ಪ್ರಶ್ನೆಗೆ ಬಹುಮಾನ ಪಡೆಯುವುದಕ್ಕೂ ವ್ಯತ್ಯಾಸವೇನು?*

ಇಲ್ಲಿ ಅದೃಷ್ಟಕ್ಕೆ ಅವಕಾಶವಿಲ್ಲ.

ಮೆಹಬೂಬ್ ಶೇಖಬಡೆ, ಗೋಕಾಕ

*ನೆಂಟರು, ಗೆಳೆಯರು ಹೆಚ್ಚಾಗಬೇಕಾದರೆ ಏನು ಮಾಡಲಿ ಸಾರ್?*

ಸಾಲ ಕೊಡುವಷ್ಟು ಶ್ರೀಮಂತನಾಗದೆ, ಸಾಲ ಕೇಳುವಷ್ಟು ಬಡವನಾಗದೆ ಜೀವಿಸಿರಿ.

ಸುಂದರ್, ಬೆಂಗಳೂರು

*ಶಿಷ್ಟಾಚಾರ ಮತ್ತು ಭ್ರಷ್ಟಾಚಾರಕ್ಕೆ ಲಿಂಕ್ ಕೊಡಿ ದೇವ್ರೂ....?*

ಶಿಷ್ಟನಿಗೆ ನಷ್ಟವಾಗಿ ಕನಿಷ್ಠದ್ದಕ್ಕೂ ಕಷ್ಟವಾದರೆ ದುಷ್ಟನಾಗಿ ಭ್ರಷ್ಟನಾಗುವನು.

ಎಲ್. ಗಿರಿರಾಜ್, ಬೆಂಗಳೂರು

*ನಮ್ಮ ರಸ್ತೆಯಲ್ಲಿ ಕ್ರಮವಾಗಿ 'ವಿವೇಕ ವಿಲ್ಲಾ', 'ಜ್ಞಾನ ವಿಲ್ಲಾ', 'ಬೋಗನ್ ವಿಲ್ಲಾ'ಗಳಿವೆ. ಇವುಗಳ ಸಾಂಕೇತಿಕ ಅರ್ಥ?*

ವಿವೇಕ, ಜ್ಞಾನಗಳನ್ನು ತೊರೆದವನಿಗೇ ಇಂದಿನ ದಿನಗಳಲ್ಲಿ ಪುಷ್ಪವೃಷ್ಟಿ ಎಂದು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಆಪತ್ಕಾಲದ ಸಂಪತ್ತು ಯಾವುದು?*

ಧೈರ್ಯ.

ಎಂ.ಎ. ಕುಮಾರ್, ಬೆಂಗಳೂರು

*ಹಿಂಬಾಲಕರು ಎನ್ನುವುದು ಹುಟ್ಟಿದ ಬಗೆ ಹೇಗೆ?*

ಮುಂದೆ ಮುಂದೆ ಹಸು, ಅದರ ಹಿಂದೆ ಬಾಲಕ್ಕೆ ತಾಗಿದಂತೆಯೇ ಕರು ಸಾಗಿದಾಗ.

## ಬಹುಮಾನಿತ ಪ್ರಶ್ನೆ

ಜವಳಿ ಜಯಣ್ಣ, ದಾವಣಗೆರೆ

*ಕನ್ನಡ ಮೀಡಿಯಂ ಬಗ್ಗೆ ಕೀಳರಿಮೆ ಏಕೆ?*

ಇಂಗ್ಲಿಷ್ ಕೊಂಡಾಡುವ, ಕನ್ನಡ ಕೊಂದಾಡುವ ಗುರುಗಳ ಪ್ರಭಾವ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಇಲ್ಲೊಬ್ಬ ಲೇಡೀಸ್ ಟೈಲರ್ ನಾನು ನಿಮಗೆ ಹುಚ್ಚಿಳಂತೆ ಪ್ರಶ್ನೆಗಳನ್ನು ಕೇಳುತ್ತೇನೆ ಅನ್ನುತ್ತಾನಲ್ಲಾ...?*

ಆತನ ಧ್ಯೇಯ ತಿಳಿಯಿತು ತನ್ನಂತೆ ಪರರ ಬಗೆದೊಡೆ..

ಎಚ್. ಆನಂದಕುಮಾರ್. ಚಿತ್ರದುರ್ಗ

*ಸಂವಿಧಾನಾತ್ಮಕ ಹುದ್ದೆಯಲ್ಲಿದ್ದೂ ಈ ರಾಜಕಾರಣಿಗಳು ಅಸಂವಿಧಾನಾತ್ಮಕ ಹೇಳಿಕೆಗಳನ್ನು ನೀಡುವರಲ್ಲಾ....?*

ಅಚ್ಚರಿಯೇನದರೋಳ್? ಕಾಳಿದಾಸನ ಪುಸ್ತಕವನ್ನು ಜಗಿಜಗಿದು ತಿಂದ ಮಾತ್ರಕ್ಕೆ ಕತ್ತೆ ಕವಿಯಾಗುವುದಿಲ್ಲ.

ಗಂಜಾಂ ನಾಗರಾಜ, ಮೈಸೂರು

*ಸ್ವರ್ಗಕ್ಕೆ ಮೂರೇ ಮೆಟ್ಟಿಲು ಎನ್ನುವರಲ್ಲಾ, ಯಾವುವು ಆ ಮೂರು ಮೆಟ್ಟಿಲುಗಳು?*




ಉತ್ಸಾಹ, ಆನಂದ, ಭ್ರಮೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಗಾಂಧೀಜಿ ಟೋಪಿ ಹಾಕುತ್ತಿರಲಿಲ್ಲವಾದರೂ ಗಾಂಧಿ ಟೋಪಿ ಎಂಬ ಹೆಸರು ಹೇಗೆ ಬಂತು?*

ಟೋಪಿಯ ಗಾಂಧಿಯೇ ಬೇರೆ; 'goneಧೀ' ಎಂದರೆ ಬುದ್ಧಿ ಕಳೆದುಕೊಂಡನಿಗೆ ತೊಡಿಸುವ ಟೋಪಿ ಅದು.

ಲಕ್ಷ್ಮಿ ಆನೆಗುಂದಿ, ನರಗುಂದ

*ಸತ್ತವರೆಲ್ಲರೂ ಸ್ವರ್ಗಸ್ಥರೇ ಆದರೆ ಸ್ವರ್ಗ ಹೌಸ್‌ಫುಲ್ ಆಗಲ್ಲವೆ?*

ಊಹೂಂ. ಸ್ವರ್ಗ ಈ ಜನ್ಮದ ರೈಲಿಂದಿಳಿದು ಮರುಜನ್ಮದ ರೈಲೇರುವ ಮುಂಚಿನ ವೇಯ್ಟಿಂಗ್ ರೂಂ ಅಷ್ಟೆ.

■ ರಾಮ್